ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 30-11-2002.

# *ರಿಟರ್ನ್ [ಬದಲಾಗಿ] ಎನ್ನುವ ಶಬ್ದದ ಸ್ಮೃತಿಯಿಂದ ಸಮಾನರಾಗಿ ಮತ್ತು ರಿಟರ್ನ್ [ಹಿಂತಿರುಗಿ) ಪ್ರಯಾಣದ ಸ್ಮೃತಿ ಸ್ವರೂಪರಾಗಿ*

(रिटर्न शब्द की स्मृति से समान बनो और रिटर्न-ज़र्नी के स्मृति स्वरूप बनो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾ ತನ್ನ ನಾಲ್ಕೂ ಕಡೆಯ ಹೃದಯ ಸಿಂಹಾಸನಾಧಿಕಾರಿ, ಭೃಕುಟಿಯ ಸಿಂಹಾಸನಾಧಿಕಾರಿ, ವಿಶ್ವದ ರಾಜ್ಯ ಸಿಂಹಾಸನಾಧಿಕಾರಿ, ಸ್ವರಾಜ್ಯಧಿಕಾರಿ ಮಕ್ಕಳನ್ನು ನೋಡುತ್ತಾ ಹರ್ಷಿತರಾಗುತ್ತಿದ್ದಾರೆ. ಪರಮಾತ್ಮನ ಹೃದಯ ಸಿಂಹಾಸನ ಇಡೀ ಕಲ್ಪದಲ್ಲಿ ಈಗ ತಾವು ಅಗಲಿ ಹೋದ, ಮುದ್ದಾದ ಮಕ್ಕಳಿಗೇ ಪ್ರಾಪ್ತಿಯಾಗಿದೆ. ಭೃಕುಟಿಯ ಸಿಂಹಾಸನವಂತೂ ಸರ್ವ ಆತ್ಮರಿಗೂ ಸಹ ಇದೆ. ಆದರೆ ಪರಮಾತ್ಮನ ಹೃದಯ ಸಿಂಹಾಸನ ಬ್ರಾಹ್ಮಣ ಆತ್ಮರ ವಿನಃ ಬೇರೆ ಯಾರಿಗೂ ಲಭಿಸಿಲ್ಲ. ಈ ಹೃದಯ ಸಿಂಹಾಸನವೇ ವಿಶ್ವದ ಸಿಂಹಾಸನವನ್ನು ಕೊಡಿಸುತ್ತದೆ. ವರ್ತಮಾನ ಸಮಯದಲ್ಲಿ ಸ್ವರಾಜ್ಯಾಧಿಕಾರಿಗಳಾಗಿದ್ದೀರಿ, ಪ್ರತಿಯೊಬ್ಬ ಬ್ರಾಹ್ಮಣ ಆತ್ಮರಿಗೂ ಸ್ವರಾಜ್ಯವು ಕೊರಳಿನ ಹಾರವಾಗಿದೆ. ಸ್ವರಾಜ್ಯ ತಮ್ಮ ಜನ್ಮದ ಅಧಿಕಾರವಾಗಿದೆ. ಈ ರೀತಿ ಸ್ವಯಂನ್ನು ಸ್ವರಾಜ್ಯ ಅಧಿಕಾರಿ ಎಂದು ಅನುಭವ ಮಾಡುತ್ತೀರಾ? ಇದು ನನ್ನ ಜನ್ಮ ಸಿದ್ಧ ಅಧಿಕಾರವಾಗಿದೆ. ಇದನ್ನು ಯಾರೂ ಸಹ ಕಿತ್ತುಕೊಳ್ಳಲು ಸಾಧ್ಯವಿಲ್ಲ ಎಂದು ಮನಸ್ಸಿನಲ್ಲಿ ದೃಢ ಸಂಕಲ್ಪವಿದೆ. ಜೊತೆ-ಜೊತೆಗೆ ನಾವು ಪರಮಾತ್ಮನ ಹೃದಯ ಸಿಂಹಾಸನಾಧಾರಿಗಳು ಎನ್ನುವ ಆತ್ಮಿಕ ನಶೆಯೂ ಸಹ ಇದೆ. ಮಾನವ ಜೀವನದಲ್ಲಿ, ತನುವಿನಲ್ಲಿ ವಿಶೇಷವಾಗಿ

ಹೃದಯವನ್ನು ಮಹಾನ್ ಎಂದು ಗಾಯನ ಮಾಡುತ್ತಾರೆ. ಹೃದಯ ನಿಂತುಹೋದಾಗ ಜೀವನವೇ ಸಮಾಪ್ತಿ ಆಗುತ್ತದೆ ಅಂದಾಗ ಆಧ್ಯಾತ್ಮಿಕ ಜೀವನದಲ್ಲೂ ಸಹ ಹೃದಯ ಸಿಂಹಾಸನಕ್ಕೆ ಬಹಳಷ್ಟು ಮಹತ್ವವಿದೆ. ಯಾರು ಹೃದಯ ಸಿಂಹಾಸನಾಧಾರಿಗಳಾಗಿದ್ದಾರೆಯೋ ಆ ಆತ್ಮರದೇ ವಿಶ್ವದಲ್ಲಿ ವಿಶೇಷ ಆತ್ಮರಾಗಿ ಗಾಯನವಾಗುತ್ತದೆ. ಅದೇ ಆತ್ಮರು ಭಕ್ತರಿಗೋಸ್ಕರ ಮಾಲೆಯ ಮಣಿಗಳ ರೂಪದಲ್ಲಿ ಸ್ಮರಣೆ ಮಾಡಲ್ಪಡುತ್ತಾರೆ. ಅದೇ ಆತ್ಮರನ್ನು ಕೋಟಿಯಲ್ಲಿ ಕೆಲವರು, ಕೆಲವರಲ್ಲೂ ಕೆಲವರು ಎಂದು ಗಾಯನ ಮಾಡಲಾಗುತ್ತದೆ ಅಂದಾಗ ಅವರು ಯಾರು? ನೀವಾಗಿದ್ದೀರಾ? ಪಾಂಡವರು ಆಗಿದ್ದೀರಾ? ಮಾತೆಯರೂ ಸಹ ಇದ್ದೀರಾ? [ಕೈಯನ್ನು ಅಲುಗಾಡಿಸುತ್ತಿದ್ದಾರೆ] ಅಂದಾಗ ತಂದೆಯೂ ಹೇಳುತ್ತಾರೆ ಹೇ! ಮುದ್ದಾದ ಮಕ್ಕಳೇ ಕೆಲವು-ಕೆಲವು ಬಾರಿ ಹೃದಯ ಸಿಂಹಾಸನವನ್ನು ಬಿಟ್ಟು ದೇಹ ರೂಪಿ ಮಣ್ಣು ಏಕೆ ಇಷ್ಟವಾಗುತ್ತದೆ? ದೇಹ ಮಣ್ಣಾಗಿದೆ. ಅಂದಾಗ ಮುದ್ದಾದ ಮಕ್ಕಳು ಎಂದೂ ಸಹ ಮಣ್ಣಿನಲ್ಲಿ ಕಾಲನ್ನು ಇಡಬಾರದು, ಸದಾ ಸಿಂಹಾಸನದಲ್ಲಿ, ಮಡಿಲಿನಲ್ಲಿ ಹಾಗೂ ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ತೂಗಾಡುತ್ತಿರಬೇಕು. ತಮಗೋಸ್ಕರ ಬಾಪ್‌ದಾದಾರವರು ಭಿನ್ನ-ಭಿನ್ನ ಉಯ್ಯಾಲೆಗಳನ್ನು ಕೊಟ್ಟಿದ್ದಾರೆ, ಕೆಲವು ಬಾರಿ ಸುಖದ ಉಯ್ಯಾಲೆಯಲ್ಲಿ ತೂಗಾಡಿರಿ. ಕೆಲವು ಬಾರಿ ಖುಷಿಯ ಉಯ್ಯಾಲೆಯಲ್ಲಿ ತೂಗಾಡಿರಿ, ಕೆಲವು ಬಾರಿ ಆನಂದದ ಉಯ್ಯಾಲೆಯಲ್ಲಿ ತೂಗಾಡುತ್ತಿರಿ.

ಇಂದು ಬಾಪ್‌ದಾದಾ ಈ ರೀತಿ ಶ್ರೇಷ್ಠ ಮಕ್ಕಳನ್ನು ನೋಡುತ್ತಿದ್ದರು - ಹೇಗೆ ನಶೆಯಿಂದ ಉಯ್ಯಾಲೆಯಲ್ಲಿ ತೂಗಾಡುತ್ತಿದ್ದಾರೆ. ತೂಗಾಡುತ್ತಿದ್ದೀರಾ? ತೂಗಾಡುತ್ತಿದ್ದೀರಾ? ಮಣ್ಣಿನಲ್ಲಿ ಹೋಗುವುದಿಲ್ಲ ತಾನೇ! ಮಣ್ಣಿನಲ್ಲಿ ಕಾಲನ್ನು ಇಡಲು ಕೆಲವು-ಕೆಲವು ಬಾರಿ ಮನಸ್ಸಾಗುತ್ತದೆಯೇ? ಏಕೆಂದರೆ 63 ಜನ್ಮದಿಂದ ಮಣ್ಣಿನಲ್ಲೇ ಕಾಲನ್ನು ಇಟ್ಟುಕೊಂಡು, ಮಣ್ಣಿನ ಜೊತೆಯೇ ಆಟವಾಡುತ್ತಿದ್ದಿರಿ, ಅಂದಾಗ ಈಗಲೂ ಸಹ ಮಣ್ಣಿನಲ್ಲಿ ಆಟ ಆಡುವುದಿಲ್ಲ ತಾನೇ? **ಕೆಲವು-ಕೆಲವು ಬಾರಿ ಮಣ್ಣಿನಲ್ಲಿ ಕಾಲು ಹೋಗುತ್ತದೆಯೋ ಅಥವಾ ಇಲ್ಲವೋ? ಕೆಲವು-ಕೆಲವು ಬಾರಿ ಹೊರಟು ಹೋಗುತ್ತದೆ. ದೇಹ ಭಾನವೂ ಸಹ ಮಣ್ಣಿನಲ್ಲಿ ಕಾಲನ್ನು ಇಡುವುದಾಗಿದೆ. ದೇಹ ಅಭಿಮಾನವಿದ್ದಾಗ ಅದು ಬಹಳ ಆಳವಾಗಿ ಮಣ್ಣಿನಲ್ಲಿ ಕಾಲು ಇಡುವುದಾಗಿದೆ. ಆದರೆ ದೇಹಭಾನ ಅರ್ಥಾತ್ ದೇಹದ ಅಭಿಮಾನ. ಇದೂ ಸಹ ಮಣ್ಣಾಗಿದೆ. ಎಷ್ಟು ಸಂಗಮಯುಗದ ಸಮಯದಲ್ಲಿ ಹೆಚ್ಚಾಗಿ ಸಿಂಹಸಾನಧಾರಿಗಳಾಗುತ್ತೀರೋ ಅಷ್ಟೂ ಸಹ ಅರ್ಧ ಕಲ್ಪ ಸೂರ್ಯ ವಂಶದ ರಾಜಧಾನಿಯಲ್ಲಿ ಮತ್ತು ಚಂದ್ರವಂಶಿಯಲ್ಲೂ ಸೂರ್ಯವಂಶೀ ರಾಜ್ಯದ ಮನೆತನದಲ್ಲಿ ಬರುತ್ತೀರಿ. ಒಂದುವೇಳೆ ಈಗ ಸಂಗಮಯುಗದಲ್ಲಿ ಕೆಲವು-ಕೆಲವು ಬಾರಿ ಸಿಂಹಾಸನಾಧಾರಿಗಳಾದಾಗ ಸೂರ್ಯವಂಶದ ಗೌರಾವಾನ್ವಿತ ಪರಿವಾರದಲ್ಲಿ ಅಷ್ಟೇ ಸ್ವಲ್ಪ ಸಮಯ ಮಾತ್ರ ಇರುತ್ತೀರಿ.** ಸಿಂಹಾಸನಾಧಾರಿಗಳ ಸರಧಿ ಆಗಿರುತ್ತದೆ. ಆದರೆ ಗೌರವಾನ್ವಿತ ಪರಿವಾರ, ರಾಜ್ಯ ಮನೆತನದ ಆತ್ಮರು ಸದಾ ಸಂಬಂಧದಲ್ಲಿ ಇರುತ್ತಾರೆ ಅಂದಾಗ ಚೆಕ್ ಮಾಡಿ ಸಂಗಮಯುಗದ ಆದಿಯ ಸಮಯದಿಂದ ಇಲ್ಲಿಯತನಕ 10 ವರ್ಷವಾಗಿರಬಹುದು, 50, 60 ವರ್ಷವಾಗಿರಬಹುದು. ಆದರೆ ಯಾವಾಗಿನಿಂದ ಬ್ರಾಹ್ಮಣರಾದಿರೋ ಆಗಿನಿಂದ ಇಲ್ಲಿಯವರೆಗೆ ಎಷ್ಟು ಸಮಯ ಹೃದಯ ಸಿಂಹಾಸನಾಧಾರಿ, ಸ್ವರಾಜ್ಯ ಸಿಂಹಾಸನಾಧಾರಿಗಳಾದಿರಿ? ಬಹಳ ಕಾಲದಿಂದ ಆಗಿದ್ದೀರಾ, ನಿರಂತರವಾಗಿದ್ದೀರಾ ಹಾಗೂ ಕೆಲವು-ಕೆಲವು ಬಾರಿ ಮಾತ್ರ ಆಗಿದ್ದೀರಾ? ಯಾರು ಪರಮಾತ್ಮನ ಸಿಂಹಾಸನಾಧಾರಿಗಳಾಗಿರುತ್ತಾರೆಯೋ ಅವರ ಚಿಹ್ನೆ ಆಗಿದೆ ಪ್ರತ್ಯಕ್ಷದ ಚಲನೆ ಮತ್ತು ಮುಖದಿಂದ ಸದಾ ನಿಶ್ಚಿಂತ ಚಕ್ರವರ್ತಿ ಆಗಿರುತ್ತಾರೆ. ತಮ್ಮ ಮನಸ್ಸಿನಲ್ಲಿ ಸ್ಥೂಲವಾದ ಹೊರೆ ತಲೆಯ ಮೇಲೆ ಇರುತ್ತದೆ. ಆದರೆ ಸೂಕ್ಷ್ಮವಾದ ಹೊರೆಯು ಮನಸ್ಸಿನಲ್ಲಿ ಇರುತ್ತದೆ ಅಂದಾಗ ಮನಸ್ಸಿನಲ್ಲಿ ಯಾವುದೇ ಹೊರೆ ಇರಬಾರದು. ಚಿಂತೆ ಇದ್ದರೆ ಅದು ಹೊರೆ

ಆಗಿದೆ, ನಿಶ್ಚಿಂತವಾಗಿರುವವರು ಡಬಲ್ ಲೈಟ್ ಆಗಿರುತ್ತಾರೆ. ಒಂದುವೇಳೆ ಯಾವುದೇ ಪ್ರಕಾರದ ಸೇವೆಯದಾಗಿರಲಿ, ಸಂಬಂಧ-ಸಂಪರ್ಕದ್ದಾಗಿರಲಿ, ಸ್ಥೂಲ ಸೇವೆಯೇ ಆಗಿರಲಿ, **ಆತ್ಮಿಕ ಸೇವೆಯ ಹೊರೆಯೂ ಇರಬಾರದು. ಏನಾಯಿತು, ಹೇಗಾಯಿತು ....ಸಫಲತೆ ಆಗುತ್ತದೆಯೋ ಅಥವಾ ಆಗುವುದಿಲ್ಲವೋ, ಯೋಚಿಸಿ, ಪ್ಲಾನ್ ಮಾಡುವುದು ಬೇರೆ ವಿಷಯವಾಗಿದೆ. ಹೊರೆಯೂ ಬೇರೆ ವಿಷಯವಾಗಿದೆ. ಹೊರೆ ಇರುವಂತಹವರ ಚಿಹ್ನೆ ಸದಾ ಮುಖದಲ್ಲಿ ಬಹಳ ಹಾಗೂ ಸ್ವಲ್ಪ ಸುಸ್ತು ಇರುತ್ತದೆ. ಸುಸ್ತಾಗುವುದೇ ಬೇರೆ ವಿಷಯವಾಗಿದೆ. ಸುಸ್ತಿನ ಚಿಹ್ನೆ ಸ್ವಲ್ಪ ಇದ್ದರೂ ಸಹ ಇದು ಹೊರೆಯ ಗುರುತಾಗಿದೆ** ಮತ್ತು ನಿಶ್ಚಿಂತ ಚಕ್ರವರ್ತಿ ಎಂದರೆ ಸೋಮಾರಿತನದಲ್ಲಿ ಇದ್ದು ನಮಗೆ ಯಾವ ಚಿಂತೆಯೂ ಇಲ್ಲ ಎಂದು ಹೇಳುವುದಲ್ಲ. ಸೋಮಾರಿತನ ಎಂಬುದು ಬಹಳ ಮೋಸ ಮಾಡುತ್ತದೆ. ತೀವ್ರ ಪುರುಷಾರ್ಥಕ್ಕೂ ಅದೇ ಮಾತು ಮತ್ತು ಸೋಮಾರಿತನಕ್ಕೂ ಅದೇ ಮಾತು. ತೀವ್ರ ಪುರುಷಾರ್ಥಿ ಸದಾ ದೃಢ ನಿಶ್ಚಯ ಇರುವ ಕಾರಣ ಇದನೇ ಯೋಚಿಸುತ್ತಾರೆ - ಪ್ರತಿ ಕಾರ್ಯವೂ ಧೈರ್ಯದಿಂದ ಮತ್ತು ತಂದೆಯ ಸಹಯೋಗದಿಂದ ಸಫಲವಾಗಿದೆ ಮತ್ತು ಸೋಮಾರಿತನದಲ್ಲಿರುವವರ ಶಬ್ದವು ಇದಾಗಿದೆ - ಆಗುತ್ತದೆ, ಆಗುತ್ತದೆ, ಆಗಿಯೇ ಇದೆ. ಏನಾದರೂ ಕಾರ್ಯ ಉಳಿದುಕೊಂಡಿದೆಯೇ, ಆಗುತ್ತದೆ ಅಂದಾಗ ಒಂದೇ ಶಬ್ದವಾಗಿದೆ. ಆದರೆ ರೂಪ ಬೇರೆ-ಬೇರೆ ಆಗಿದೆ.

**ವರ್ತಮಾನ ಸಮಯದಲ್ಲಿ ಮಾಯೆ ವಿಶೇಷವಾಗಿ ಎರಡು ರೂಪದಲ್ಲಿ ಮಕ್ಕಳಿಂದ ಪೇಪರ್ ತೆಗೆದುಕೊಳ್ಳುತ್ತದೆ. ಅದನ್ನು ತಿಳಿದುಕೊಂಡಿದ್ದೀರಾ? ಎಲ್ಲರಿಗೂ ಸಹ ತಿಳಿದಿದೆ - ಒಂದು ವ್ಯರ್ಥ ಸಂಕಲ್ಪ, ವಿಕಲ್ಪವಲ್ಲ ವ್ಯರ್ಥ ಸಂಕಲ್ಪ. ಎರಡನೆಯದೂ ಸಹ ತಿಳಿಸುವುದೇನು? ಎರಡನೆಯದಾಗಿದೆ - ನಾನೇ ಸರಿಯಾಗಿದ್ದೇನೆ. ಏನೂ ಮಾಡಿದರೂ, ಏನು ಹೇಳಿದರೂ, ಏನು ಯೋಚಿಸಿದರೂ...... ನಾನು ಕಡಿಮೆ ಇಲ್ಲ ಸರಿಯಾಗಿದ್ದೇನೆ,** ಬಾಪ್‌ದಾದಾ ಸಮಯ ಪ್ರಮಾಣ ಈಗ ಇದನ್ನು ಇಷ್ಟಪಡುತ್ತಾರೆ ಒಂದೇ ಶಬ್ದವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಬೇಕು. ತಂದೆಯಿಂದ ಸರ್ವ ಪ್ರಾಪ್ತಿಗಳ, ಸ್ನೇಹದ ಸಹಯೋಗದ ರಿಟರ್ನ್ ಅನ್ನು ಕೊಡಬೇಕು. ಬದಲಾಗಿ ಕೊಡುವುದು ಎಂದರೆ ಸಮಾನರಾಗುವುದಾಗಿದೆ. ಎರಡನೆಯದು ಈಗ ನಮ್ಮದು ಹಿಂತಿರುಗುವ ಯಾತ್ರೆಯಾಗಿದೆ. ಬದಲಾಗಿ ಎನ್ನುವ ಈ ಒಂದು ಶಬ್ದ ಸದಾ ನೆನಪಿರಬೇಕು ಅದಕ್ಕೋಸ್ಕರ ಬಹಳ ಸಹಜವಾದ ಸಾಧನವಾಗಿದೆ - ಪ್ರತಿಯೊಂದು ಸಂಕಲ್ಪ, ಮಾತು ಮತ್ತು ಕರ್ಮವನ್ನು ಬ್ರಹ್ಮಾತಂದೆಯ ಜೊತೆ ಹೋಲಿಕೆ ಮಾಡಿಸಿ. ತಂದೆಯ ಸಂಕಲ್ಪ ಏನಾಗಿತ್ತು? ತಂದೆಯ ಮಾತು ಏನಾಗಿದೆ? ತಂದೆಯ ಕರ್ಮ ಏನಾಗಿದೆ? ಅದಕ್ಕೆ ತಂದೆಯನ್ನು ಅನುಸರಣೆ ಮಾಡಿ ಎಂದು ಹೇಳಲಾಗುತ್ತದೆ. ಅನುಸರಣೆ ಮಾಡುವುದು ಸಹಜವಾಗಿದೆಯಲ್ಲವೇ! ಹೊಸದಾಗಿ ಯೋಚಿಸುವುದು, ಹೊಸದಾಗಿ ಮಾಡುವುದು, ಇದರ ಅವಶ್ಯಕತೆ ಇಲ್ಲ, ತಂದೆಯು ಏನು ಮಾಡಿದರೋ, ಆ ರೀತಿ ತಂದೆಯನ್ನು ಅನುಸರಣೆ ಮಾಡುವುದು. ಇದು ಸಹಜವಾಗಿದೆಯಲ್ಲವೇ!

ಶಿಕ್ಷಕಿಯರು? ಶಿಕ್ಷಕಿಯರು ಕೈಯನ್ನು ಎತ್ತಿರಿ. ಅನುಸರಣೆ ಮಾಡುವುದು ಸಹಜವಾಗಿದೆಯೋ ಅಥವಾ ಕಷ್ಟವಾಗಿದೆಯೋ? ಸಹಜವಾಗಿದೆಯಲ್ಲವೇ! ತಂದೆಯನ್ನು ಅನುಸರಣೆ ಮಾಡಿರಿ. ಮೊದಲು ಚೆಕ್ ಮಾಡಿಕೊಳ್ಳಿ, ಹೇಗೆ ಮೊದಲು ಯೋಚಿಸಿ ನಂತರ ಮಾಡಿ ಅಂದಾಗ ಮೊದಲು ತೂಕ ಮಾಡಿ ನಂತರ ಮಾತನಾಡಿ ಎನ್ನುವ ಗಾದೆ ಇದೆ. ಅಂದಾಗ ಎಲ್ಲಾ ಶಿಕ್ಷಕಿಯರು ಈ ವರ್ಷದಲ್ಲಿ, ಇದು ಈ ವರ್ಷದ ಕೊನೆಯ ತಿಂಗಳಾಗಿದೆ. ಹಳೆಯದು ಹೋಗುತ್ತದೆ

ಹೊಸದು ಬರುತ್ತದೆ. ಹೊಸದು ಬರುವ ಮೊದಲು ಏನು ಮಾಡಬೇಕು, ಮೊದಲು ಅದರ ತಯಾರಿಯನ್ನು ಮಾಡಿಕೊಳ್ಳಿರಿ. ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡುವುದು ಬಿಟ್ಟರೆ ಬೇರೆ ಯಾವ ಹೆಜ್ಜೆಯನ್ನು ಇಡುವುದಿಲ್ಲ ಎನ್ನುವ ಈ ಸಂಕಲ್ಪವನ್ನು ಮಾಡಿರಿ. ಕೇವಲ ಹೆಜ್ಜೆ ಅಷ್ಟೇ, ಹೆಜ್ಜೆಯ ಮೇಲೆ ಹೆಜ್ಜೆ ಇಡುವುದು ಸಹಜವಾಗಿದೆಯಲ್ಲವೇ! ಹೊಸ ವರ್ಷಕ್ಕೋಸ್ಕರ ಈಗಿನಿಂದಲೇ ಸಂಕಲ್ಪದಲ್ಲಿ ಪ್ಲಾನ್ ಮಾಡಿರಿ. **ಹೇಗೆ ಬ್ರಹ್ಮಾ ತಂದೆ ಸದಾ ನಿಮಿತ್ತ ಮತ್ತು ನಿರ್ಮಾಣವಾಗಿದ್ದರೋ ಹಾಗೆಯೇ ನಿಮಿತ್ತ ಭವ! ಮತ್ತು ನಿರ್ಮಾಣಭವ!ರಾಗಿರಿ. ಕೇವಲ ನಿಮಿತ್ತ ಭಾವವಲ್ಲ, ನಿಮಿತ್ತ ಭಾವದ ಜೊತೆಗೆ ನಿರ್ಮಾಣ ಭಾವವೂ ಇರಬೇಕು. ಇವರೆಡರ ಅವಶ್ಯಕತೆಯೂ ಇದೆ ಏಕೆಂದರೆ ನಿಮಿತ್ತ ಶಿಕ್ಷಕಿಯರಾಗಿದ್ದೀರಲ್ಲವೇ! ನಿಮಿತ್ತರಾಗಿದ್ದೀರಲ್ಲವೇ? ಅಂದಾಗ ಸಂಕಲ್ಪದಲ್ಲೂ, ಮಾತಿನಲ್ಲೂ ಮತ್ತು ಯಾವುದೇ ಸಂಬಂಧದಲ್ಲಿ, ಕರ್ಮದಲ್ಲಿ ಪ್ರತಿ ಮಾತಿನಲ್ಲೂ ಸಹ ನಿರ್ಮಾಣರಾಗಿರಿ. ಯಾರು ನಿರ್ಮಾಣರಾಗಿರುತ್ತಾರೆಯೋ ಅವರೇ ನಿಮಿತ್ತ ಭಾವದಲ್ಲಿ ಇರುತ್ತಾರೆ. ಯಾರು ನಿರ್ಮಾಣರಾಗುವುದಿಲ್ಲವೋ. ಅವರಲ್ಲಿ ಬಹಳ ಸ್ವಲ್ಪ, ಬಹಳ ಸೂಕ್ಷ್ಮವಿರುತ್ತದೆ. ಮಹಾನ್ ರೂಪದಲ್ಲಿ ಅಭಿಮಾನ ಇಲ್ಲದಿದ್ದರೂ ಅಹಂಕಾರವಿರುತ್ತದೆ. ಈ ಅಹಂಕಾರ, ಇದು ಅಭಿಮಾನದ ಅಂಶವಾಗಿದೆ ಮತ್ತು ಮಾತಿನಲ್ಲಿ ಸದಾ ನಿರ್ಮಲ ಭಾಷೆ ಮಧುರ ಭಾಷಿಗಳಾಗಿರುತ್ತಾರೆ. ಯಾವಾಗ ಸಂಬಂಧ-ಸಂಪರ್ಕದಲ್ಲಿ ಆತ್ಮಿಕ ರೂಪದ ಸ್ಮೃತಿ ಇರುತ್ತಡೆಯೋ ಆಗ ಸದಾ ನಿರಾಕಾರಿ ಮತ್ತು ನಿರಹಂಕಾರಿ ಆಗಿರುತ್ತಾರೆ.** ಬ್ರಹ್ಮಾತಂದೆಯ ಕೊನೆಯ ಮೂರು ಶಬ್ದಗಳು ನೆನಪು ಇದೆಯೇ? ನಿರಾಕಾರಿ, ನಿರಹಂಕಾರಿ ಅವರೇ ನಿರ್ವಿಕಾರಿಗಳಾಗಿರುತ್ತಾರೆ. ಒಳ್ಳೆಯದು ತಂದೆಯನ್ನು ಅನುಸರಣೆ ಮಾಡಿರಿ. ಪಕ್ಕಾ ಆಯಿತಲ್ಲವೇ!

ಮುಂದಿನ ವರ್ಷದ ಮುಖ್ಯ ಲಕ್ಷ್ಯವು ಸ್ಮೃತಿಯಾಗಿದೆ - ಈ ಮೂರೂ ಶಬ್ದ ನಿರಾಕಾರಿ, ನಿರಹಂಕಾರಿ, ನಿರ್ವಿಕಾರಿ ಇವುಗಳ ಅಂಶವೂ ಇರಬಾರದು. ದೊಡ್ಡ ದೊಡ್ಡ ರೂಪದಲ್ಲಿ ಇರುವುದು ಸರಿಯಾಗಿದೆ. ಆದರೆ ಅಂಶ ಇರಬಾರದು. ಏಕೆಂದರೆ ಅಂಶವೇ ಪೆಟ್ಟನ್ನು ಕೊಡುತ್ತದೆ. ತಂದೆಯನ್ನು ಅನುಸರಣೆ ಮಾಡುವ ಅರ್ಥವಾಗಿದೆ ಈ ಮೂರೂ ಶಬ್ದಗಳನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳುವುದು. ಸರಿಯೇ?

ಒಳ್ಳೆಯದು ಡಬಲ್ ವಿದೇಶಿಯರು ಎದ್ದು ನಿಲ್ಲಿರಿ. ಒಳ್ಳೆಯ ಗ್ರೂಪ್ ಬಂದಿದೆ. ಬಾಪ್‌ದಾದಾರವರಿಗೆ ಡಬಲ್ ವಿದೇಶಿಗಳ ಒಂದು ವಿಷಯದಲ್ಲಿ ಖುಷಿ ಇದೆ. ಅದು ಯಾವುದಾಗಿದೆ ಎಂದು ತಿಳಿದಿದೆಯೇ? ತಿಳಿದಿದೆಯೇ? ನೋಡಿ ಎಷ್ಟೊಂದು ದೂರದಿಂದ ದೂರದೇಶದಿಂದ ಬರುತ್ತೀರಿ ಆದರೆ ಯಾವ ಸರದಿಯಲ್ಲಿ ಬರಬೇಕೋ ಆ ಸರದಿಯಲ್ಲಿ ಬಂದು ತಲುಪಿದ್ದೀರಿ. ನಿಮಗೆ ಇದೇ ಡೈರೆಕ್ಷನ್ ಸಿಕ್ಕಿದೆ. ಪುರುಷಾರ್ಥ ಮಾಡಿ ದೊಡ್ಡದಾದ ಗುಂಪು ಬಂದು ತಲುಪಿದೆ. ದಾದಿಯರೇ ಡೈರೆಕ್ಷನ್ ಸರಿಯಾಗಿ ಮಾಡಿದ್ದೀರಲ್ಲವೇ! ಅದಕ್ಕೆ ಶುಭಾಷಯಗಳು. ಬಾಪ್‌ದಾದಾ ಒಬ್ಬೊಬ್ಬರನ್ನು ನೋಡುತ್ತಿದ್ದಾರೆ. ದೃಷ್ಟಿಯನ್ನು ಕೊಡುತ್ತಿದ್ದಾರೆ. ಸ್ಟೇಜಿನ ಮೇಲೆ ದೃಷ್ಟಿ ಸಿಗುತ್ತದೆ ಎನ್ನುವುದಲ್ಲ, ದೂರದಿಂದಲೇ ಬಹಳ ಚೆನ್ನಾಗಿ ಕಾಣಿಸುತ್ತದೆ. ಡಬಲ್ ವಿದೇಶಿಗಳು ಹಾಂಜಿಯ ಪಾಠವನ್ನು ಚೆನ್ನಾಗಿ ಓದಿದ್ದಾರೆ. ಬಾಪ್‌ದಾದಾರವರಿಗೆ ಡಬಲ್ ವಿದೇಶಿಯರ ಮೇಲೆ ಪ್ರೀತಿಯಂತೂ ಇದೆ ಆದರೆ ಹೆಮ್ಮೆಯೂ ಇದೆ. ಏಕೆಂದರೆ ವಿಶ್ವದ ಮೂಲೆ-ಮೂಲೆಯಲ್ಲಿ ಸಂದೇಶವನ್ನು ತಲುಪಿಸುವುದಕ್ಕೋಸ್ಕರ ಡಬಲ್ ವಿದೇಶಿಯರು ನಿಮಿತ್ತರಾಗಿದ್ದಾರೆ. ವಿದೇಶದಲ್ಲಿ ಇಲ್ಲಿಯವರೆಗೆ ಯಾವುದಾದರೂ ವಿಶೇಷ ಸ್ಥಾನವಿದೆಯೇ, ಹಳ್ಳಿ- ಹಳ್ಳಿಯಲ್ಲೂ ಸಹ ಇದೆಯೇ ಅಥವಾ ವಿಶೇಷ ಸ್ಥಾನದಲ್ಲಿ ಮಾತ್ರ

ಇದೆಯೇ? ಮೂಲೆ-ಮೂಲೆಯಲ್ಲೂ, ಹಳ್ಳಿ-ಹಳ್ಳಿಯಲ್ಲೂ ಚಿಕ್ಕ ಸ್ಥಾನ ಹಾಗೂ ವಿಶೇಷ ಸ್ಥಾನವು ಉಳಿದುಕೊಂಡಿದೆಯೇ? ಆದರೂ ನೋಡಿ ಈ ಗುಂಪಿನಲ್ಲಿ ಯಾರೆಲ್ಲಾ ಬಂದಿದ್ದಾರೆಯೋ, ಅವರು ಎಷ್ಟೊಂದು ದೇಶಗಳಿಂದ ಬಂದಿದ್ದಾರೆ? ಲೆಕ್ಕ ಮಾಡಿದ್ದೀರಾ? ಮಾಡಿಲ್ಲ. ಆದರೂ ವಿಶ್ವದ ಅನೇಕ ಭಿನ್ನ-ಭಿನ್ನ ದೇಶಗಳಲ್ಲಿ ತಾವು ಆತ್ಮರೇ ನಿಮಿತ್ತರಾಗಿದ್ದೀರಿ ಎಂದು ಬಾಪ್‌ದಾದಾರವರಿಗೆ ತಿಳಿದಿದೆ. ಡಬಲ್ ವಿದೇಶಿಯರು ಬಾಪ್‌ದಾದಾರವರ ವಿಶ್ವ ಕಲ್ಯಾಣಕಾರಿ ಬಿರುದನ್ನು ಪ್ರತ್ಯಕ್ಷ ಮಾಡಿದ್ದಾರೆ. ಚೆನ್ನಾಗಿದೆ. ಪ್ರತಿಯೊಬ್ಬರು ತಮ್ಮ- ತಮ್ಮ ಸ್ಥಾನದಲ್ಲಿ ಸ್ವಯಂ ತಮ್ಮ ಪುರುಷಾರ್ಥದಲ್ಲಿ ಮತ್ತು ಸೇವೆಯಲ್ಲಿ ಮುಂದುವರೆಯುತ್ತಿದ್ದೀರಿ ಮತ್ತು ಸದಾ ಮುಂದುವರೆಯುತ್ತಲೇ ಇರುತ್ತೀರಿ. ಏಕೆಂದರೆ ನೀವು ಸಫಲತೆಯ ನಕ್ಷತ್ರಗಳಾಗಿದ್ದೀರಿ. ಬಹಳ ಒಳ್ಳೆಯದು.

ಕುಮಾರರೊಂದಿಗೆ: ಮಧುಬನದ ಕುಮಾರರೂ ಸಹ ಇದ್ದಾರೆ. ನೋಡಿ - ಕುಮಾರರ ಸಂಖ್ಯೆ ಎಷ್ಟೊಂದು ಇದೆ? ಕುಮಾರರು ಅರ್ಧ ಹಾಲ್ ಇದ್ದಾರೆ. ಕುಮಾರರು ಈಗ ಸಾಧಾರಣವಾದ ಕುಮಾರರಲ್ಲ. ಈಗ ಕುಮಾರರ ಬಿರುದಾಗಿದೆ. ಯಾವ ಕುಮಾರರಾಗಿದ್ದೀರಿ? ಎಲ್ಲರೂ ಬ್ರಹ್ಮಾಕುಮಾರರಾಗಿದ್ದೀರಿ, ಆದರೆ **ಬ್ರಹ್ಮಾಕುಮಾರರ ವಿಶೇಷತೆ ಏನಾಗಿದೆ? ಸದಾ ಎಲ್ಲೇ ಅಶಾಂತಿ ಆದರೂ ಅಲ್ಲಿ ಶಾಂತಿಯನ್ನು ಹರಡಿಸುವಂತಹ ಶಾಂತಿ ದೂತರು ಆಗಿದ್ದೀರಿ ಎನ್ನುವುದೇ ಕುಮಾರರ ವಿಶೇಷತೆ ಆಗಿದೆ.** ಮನಸ್ಸಿನ ಅಶಾಂತಿಯೂ ಇಲ್ಲ, ಹೊರಗಿನ ಅಶಾಂತಿಯೂ ಸಹ ಇಲ್ಲ. ಕುಮಾರರ ಕಾರ್ಯವೇ ಆಗಿದೆ - ಕಷ್ಟದ ಕೆಲಸ ಮಾಡುವುದು. ಹಾರ್ಡ್ ವರ್ಕರ್ ಆಗಿದ್ದೀರಲ್ಲವೇ! ಅಂದಾಗ ಇಂದಿನ ದಿನ ಎಲ್ಲದಕ್ಕಿಂತ ಮುಖ್ಯವಾಗಿ ಅಶಾಂತಿಯನ್ನು ದೂರ ಮಾಡಿ ಶಾಂತಿಯನ್ನು ಹರಡಿಸುವುದೇ ಎಲ್ಲದಕ್ಕಿಂತ ಕಷ್ಟದಲ್ಲೂ ಕಷ್ಟದ ಕೆಲಸವಾಗಿದೆ. ಈ ರೀತಿಯ ಕುಮಾರರಾಗಿದ್ದೀರಾ? ಆಗಿದ್ದೀರಾ? ಅಶಾಂತಿಯ ನಾಮರೂಪಗಳು ಇರಬಾರದು ಆ ರೀತಿ ಶಾಂತಿ ದೂತರಾಗಿದ್ದೀರಾ? ಇಡೀ ವಿಶ್ವದಲ್ಲಿ, ತಮ್ಮ ಸಂಬಂಧ-ಸಂಪರ್ಕದಲ್ಲೂ ಸಹ ಇರಬಾರದು. ಶಾಂತಿ ದೂತರು ಎಲ್ಲೇ ಬೆಂಕಿ ಉರಿಯುತ್ತಿದ್ದರೂ ಅದನ್ನು ಆರಿಸುವಂತಹವರಾಗಿರಬೇಕು. ಅಂದಾಗ ಅಶಾಂತಿಯನ್ನು ಶಾಂತಿಯನ್ನಾಗಿ ಪರಿವರ್ತನೆ ಮಾಡುವುದೇ ಶಾಂತಿದೂತರ ಕಾರ್ಯವಾಗಿದೆ. ಹಾಗಾದರೆ ಶಾಂತಿದೂತರಾಗಿದ್ದೀರಲ್ಲವೇ? ಪಕ್ಕಾ! ಪಕ್ಕಾ? ಪಕ್ಕಾ? ಬಹಳ ಚೆನ್ನಾಗಿದೆ. ಬಾಪ್‌ದಾದಾ ಇಷ್ಟೆಲ್ಲಾ ಕುಮಾರರನ್ನು ನೋಡಿ ಖುಷಿಯಾಗುತ್ತಿದ್ದಾರೆ. ದೆಹಲಿಯಲ್ಲಿ ಹೆಚ್ಚಾಗಿ ಕುಮಾರರು ಬರಬೇಕು ಏಕೆಂದರೆ ಕುಮಾರರು ಎಂದರೆ ಜಗಳವಾಡುವಂತಹವರು ಎಂದು ಸರ್ಕಾರದವರು ತಿಳಿದುಕೊಂಡಿದ್ದಾರೆ. ಕುಮಾರರನ್ನು ನೋಡಿದರೆ ಹೆದರುತ್ತಾರೆ. ಆದ್ದರಿಂದ ಬಾಪ್‌ದಾದಾ ದೆಹಲಿಯಲ್ಲಿ ಹೆಚ್ಚಾಗಿ ಕುಮಾರರು ಬರಬೇಕು ಎಂದು ಪ್ಲಾನ್ ಮಾಡಿದ್ದರು. ಕುಮಾರರ ಕಮಾಲ್ ಆಗಿದೆ ಹೆದರುವ ಸರ್ಕಾರವೂ ಸಹ ಪ್ರತಿಯೊಬ್ಬ ಬ್ರಹ್ಮಾಕುಮಾರರನ್ನು ಶಾಂತಿದೂತರೆಂಬ ಬಿರುದಿನಿಂದ ಸ್ವಾಗತ ಮಾಡುವುದು. ಇಡೀ ವಿಶ್ವದಲ್ಲಿ ಬ್ರಹ್ಮಾ ಕುಮಾರರು ಶಾಂತಿದೂತರಾಗಿದ್ದಾರೆ ಎಂದು ಹರಡಬೇಕು. ಆಗುತ್ತದೆಯೇ? ದೆಹಲಿಯಲ್ಲೇ ಮಾಡಬೇಕು. ಮಾಡಬೇಕಲ್ಲವೇ - ದಾದಿಯರು ಮಾಡುತ್ತೀರಾ? ಇಷ್ಟೆಲ್ಲಾ ಕುಮಾರರಿದ್ದಾರೆ. ಒಂದು ಗುಂಪಿನಲ್ಲೇ ಇಷ್ಟೊಂದು ಕುಮಾರರಿದ್ದರೆ, ಎಲ್ಲಾ ಗುಂಪಿನಲ್ಲಿ ಇನ್ನೆಷ್ಟು ಕುಮಾರರು ಇರಬಹುದು? ವಿಶ್ವದಲ್ಲಿ ಎಷ್ಟು ಇರುತ್ತಾರೆ? [1 ಲಕ್ಷ ಇರಬಹುದು] ಅಂದಾಗ ಕುಮಾರರು ಕಮಾಲ್ ಮಾಡಿರಿ. ಸರ್ಕಾರದವರಿಗೆ ಕುಮಾರರ ಪ್ರತಿ ಯಾವ ಉಲ್ಟಾ ಭಾವನೆ ಇದೆಯೋ ಅದನ್ನು ಸುಲ್ಟಾ ಮಾಡಿರಿ. ಆದರೆ ಮನಸ್ಸಿನಲ್ಲೂ ಸಹ ಅಶಾಂತಿ ಇರಬಾರದು. ಜೊತೆಗಾರರಲ್ಲೂ ಸಹ ಅಶಾಂತಿ ಇರಬಾರದು ಮತ್ತು ತಮ್ಮ ಸ್ಥಾನದಲ್ಲೂ ಸಹ ಅಶಾಂತಿ ಇರಬಾರದು. ತಮ್ಮ

ನಗರದಲ್ಲೂ ಸಹ ಅಶಾಂತಿ ಇರಬಾರದು. ಕುಮಾರರ ಮುಖದಲ್ಲಿ ಬೋರ್ಡನ್ನು ಹಾಕುವಂತಹ ಆವಶ್ಯಕತೆ ಇಲ್ಲ. ಆದರೆ ಮಸ್ತಕದಲ್ಲಿ ತನಗೆ ತಾನೇ ಬರೆಯಲ್ಪಟ್ಟಿದೆ. ಶಾಂತಿದೂತ ಎಂದು ಎಲ್ಲರಿಗೂ ಅನುಭವ ಆಗಬೇಕು. ಸರಿಯೇ!'

ಕುಮಾರಿಯರು ಎದ್ದೇಳಿ: ಕುಮಾರಿಯರು ಬಹಳಷ್ಟು ಇದ್ದಾರೆ. ಯಾರು ಸೇವಾಕೇಂದ್ರದಲ್ಲಿ ಇರುತ್ತಾರೆಯೋ ಅವರಲ್ಲ, ಯಾರು ಸೇವಾಕೇಂದ್ರದಲ್ಲಿ ಇರುವುದಿಲ್ಲವೋ ಅವರು ಎದ್ದೇಳಿ, ಅಂದಾಗ ಈ ಎಲ್ಲಾ ಕುಮಾರಿಯರ ಲಕ್ಷ್ಯವೇನಾಗಿದೆ? ಕೆಲಸ ಮಾಡುವುದಾಗಿದೆಯೇ ಅಥವಾ ವಿಶ್ವ ಸೇವೆ ಮಾಡುವುದಾಗಿದೆಯೇ? ಕಿರೀಟವನ್ನು ತಲೆಯ ಮೇಲೆ ಇಟ್ಟುಕೊಳ್ಳಬೇಕೋ ಅಥವಾ  ಬುಟ್ಟಿಯನ್ನು ಇಟ್ಟುಕೊಳ್ಳಬೇಕೋ? ಏನನ್ನು ಇಟ್ಟುಕೊಳ್ಳಬೇಕು? ನೋಡಿ – ಎಲ್ಲಾ ಕುಮಾರಿಯರು ದಯಾ ಹೃದಯಿಗಳಾಗಬೇಕು. ವಿಶ್ವದ ಆತ್ಮರಿಗೆ ಕಲ್ಯಾಣವಾಗಬೇಕು. 21 ಕುಲದ ಉದ್ಧಾರ ಮಾಡುವಂತಹವರು ಎಂದು ಕುಮಾರಿಯರ ಗಾಯನವಿದೆ. ಅಂದಾಗ ಅರ್ಧಕಲ್ಪ 21 ಕುಲವಾಗುತ್ತದೆ. ಈ ರೀತಿಯ ಕುಮಾರಿಯರಾಗಿದ್ದೀರಾ? ಯಾರು 21 ಕುಲದ ಕಲ್ಯಾಣ ಮಾಡುತ್ತೀರೋ ಅವರು ಕೈಯನ್ನು ಎತ್ತಿರಿ. ಒಂದು ಪರಿವಾರ ಅಲ್ಲ 21 ಪರಿವಾರಗಳು ಮಾಡುತ್ತೀರಾ? ನೋಡಿ ತಮ್ಮ ಹೆಸರು ನೋಟ್ ಆಗುತ್ತದೆ ಮತ್ತು ಪುನಃ ದಯಾಹೃದಯಿಗಳಾಗಿದ್ದೀರಾ ಎಂದು ನೋಡಲಾಗುತ್ತದೆ. ಹಾಗೂ ಯಾವುದಾದರೂ ಲೆಕ್ಕಾಚಾರ ಉಳಿದುಕೊಂಡಿದೆಯೇ? ಈಗ ಸಮಯದ ಮೊದಲೇ ತಯಾರಿ ಆಗಬೇಕು ಎನ್ನುವುದನ್ನು ಸಮಯವು ಸೂಚನೆಯನ್ನು ಕೊಡುತ್ತಿದೆ. ಸಮಯವನ್ನು ನೋಡುತ್ತಿದ್ದರೆ ಸಮಯವೂ ಕಳೆಯುತ್ತಿರುತ್ತದೆ. ಆದ್ದರಿಂದ ಲಕ್ಷ್ಯವಿರಲಿ ನಾವೆಲ್ಲಾ ವಿಶ್ವ ಕಲ್ಯಾಣಿ ದಯಾಹೃದಯ ತಂದೆಯ ಮಕ್ಕಳು ದಯಾಹೃದಯಿಗಳಾಗಿದ್ದೇವೆ, ಸರಿಯಾಗಿದೆಯಲ್ಲವೇ? ದಯಾ ಹೃದಯಿಗಳಾಗಿದ್ದೀರಲ್ಲವೇ! ದಯಾಹೃದಯಿ ಆಗಿರಿ. ಸ್ವಲ್ಪ ಮತ್ತು ತೀವ್ರಗತಿಯಿಂದ ಆಗಿರಿ. ಕುಮಾರಿಯರಿಗೆ ತಂದೆಯ ಸಿಂಹಾಸನ ಸಹಜವಾಗಿ ಸಿಗುತ್ತದೆ. ಹೊಸ ವರ್ಷದಲ್ಲಿ ಏನು ಕಮಾಲ್ ಮಾಡಿ ತೋರಿಸುತ್ತೀರಿ ಎಂದು ನೋಡಲಾಗುತ್ತದೆ. ಒಳ್ಳೆಯದು..

ಮಾತೆಯರು ಎದ್ದು ನಿಲ್ಲಿರಿ ಕ್ಲಾಸ್ ನಲ್ಲಿ ಅರ್ಧ ಜನ ಮಾತೆಯರಿದ್ದಾರೆ. ಕೈಯನ್ನು ಅಲುಗಾಡಿಸಿರಿ. ಈ ದೃಶ್ಯ ಚೆನ್ನಾಗಿ ಅನಿಸುತ್ತಿದೆ. ವಿದೇಶಿಯರಲ್ಲಿಯೂ ಸಹ ಮಾತೆಯರು ಇದ್ದಾರೆ. ಮಾತೆಯರು ಏನು ಅದ್ಭುತವನ್ನು ಮಾಡುತ್ತೀರಿ? ಮಾತೆಯರ ಒಂದು ಹಾಡು ತಯಾರಾಗಿದೆ ಅಲ್ಲವೇ! ಯಾವ ಹಾಡು? ಸ್ಮೃತಿ ಇದೆಯೇ? ಶಕ್ತಿಯರೇ ಪ್ರತ್ಯಕ್ಷವಾದರು.... ಈ ಹಾಡನ್ನು ಕೇಳಿದ್ದೀರಾ? ಕೇಳದಿದ್ದರೆ ನಾಳೆ ಕೇಳಿಸಿರಿ. ವಿಶ್ವದಲ್ಲಿ ನಾಲ್ಕು ಕಡೆ ಶಕ್ತಿಯರ ಗುಂಪು ಬಂದಿದೆ. ನೀವು ಶಕ್ತಿಯರು, ಶಕ್ತಿ ಮಾತೇಯರು. ಮಾತೆಯರ ಕೆಲಸವೇನು? ಮಕ್ಕಳನ್ನು ಎಚ್ಚರಗೊಳಿಸುವುದು, ಪಾಲನೆ ಮಾಡುವುದು ಮತ್ತು ಅಧಿಕಾರಿಯನ್ನಾಗಿ ಮಾಡುವುದು. ಈಗ ಭಾರತ ದೇಶದಲ್ಲಿ ಅಥವಾ ವಿಶ್ವದಲ್ಲಿ ತಂದೆಯ ಮಕ್ಕಳು ಇದ್ದಾರೆ. ನಿಮ್ಮ ಸಹೋದರಿಯರು ನಿದ್ರೆ ಹೋಗುತ್ತಿದ್ದಾರೆ. ಅವರನ್ನು ಎಚ್ಚರಗೊಳಿಸಿ, ಹಾಡನ್ನಂತೂ ಬಹಳ ಹಾಡುತ್ತಾರಲ್ಲವೇ ಏಳಿ, ಎದ್ದೇಳಿ ಎಂದು ಈಗ ನಿದ್ದೆ ಮಾಡುತ್ತಿರುವ ಆತ್ಮರನ್ನು ಬೇಗ ಬೇಗ ಎಚ್ಚರಗೊಳಿಸಿ. ತಮ್ಮ ಸ್ವಲ್ಪ ವಾರಸತ್ವವನ್ನಾದರೂ ಪಡೆಯಬೇಕು. ಏಕೆಂದರೆ ಈಗ ಇನ್ನೂ ಬಹಳ ಆಲಸ್ಯ ಎಂಬ ಬೋರ್ಡನ್ನು ಇಟ್ಟಿಲ್ಲ. ಆಲಸ್ಯವಾಗಿದೆ. ಆದರೆ ಬಹಳ ಆಲಸ್ಯವಾಗಿಲ್ಲ. ಬಹಳ ಆಲಸ್ಯವಾಗುವ ಮೊದಲೇ ನಿದ್ದೆ ಮಾಡುತ್ತಿರುವವರನ್ನು ಎಚ್ಚರಗೊಳಿಸಿ, ಎಚ್ಚರಗೊಳಿಸುತ್ತೀರಲ್ಲವೇ? ನಿಮ್ಮ ಸ್ಥಾನಗಳಲ್ಲಿ ಎಲ್ಲಿ ಸೇವೆಯನ್ನು ಮಾಡುತ್ತಿರೋ ಅಲ್ಲೇ ಎಚ್ಚರಗೊಳಿಸಿ

ಮತ್ತು ಅವರು ದೀಪದ ಹುಳುಗಳಂತೆ ಆಗಿ ದೀಪದವರೆಗೂ ತಲುಪುವ ರೀತಿ ಪೂರ್ತಿಯಾಗಿ ಎಚ್ಚರಗೊಳಿಸುವ ಸೇವೆಯನ್ನು ಮಾಡಿರಿ. ಈಗ ಎರಡನೇ ವರ್ಷದ ಫಲಿತಾಂಶದಲ್ಲಿ ಒಂದೊಂದು ಮಾತೆ ಒಂದೊಂದು ತಿಂಗಳಲ್ಲಿ ಒಬ್ಬೊಬ್ಬರನ್ನು ತಯಾರು ಮಾಡಬೇಕು. ಮಾಡಬಲ್ಲಿರಾ? ಒಂದು ದಿನದಲ್ಲಿ ಅಲ್ಲ ಒಂದು ತಿಂಗಳಲ್ಲಿ ತಯಾರು ಮಾಡಬೇಕು. ಒಂದು ತಿಂಗಳಲ್ಲಿ ತಯಾರು ಮಾಡಲಾಗದಿದ್ದರೆ. ಎರಡು ತಿಂಗಳಲ್ಲಿ ತಯಾರು ಮಾಡಿರಿ. ಈ ವರ್ಷದಲ್ಲಿ ಇಷ್ಟು ಜನ ಮಾತೆಯರು, ಎರಡನೇ ವರ್ಷದಲ್ಲಿ ಇಷ್ಟು ಜನ ಮಾತೆಯರು ಎಂದು ಫಲಿತಾಂಶ ಬರುತ್ತದೆ ಅಲ್ಲವೇ. ಹೊಸ ವರ್ಷದಲ್ಲಿ ಈಗ ಎಷ್ಟು ಜನ ಮಾತೆಯರು ಬಂದಿದ್ದಾರೆ? ಎಷ್ಟು ಜನ ಸಂಖ್ಯೆಯನ್ನು ಹೆಚ್ಚಿಸಿದ್ದಾರೆ ಎಂಬುವುದನ್ನು ನೋಡುತ್ತಾರೆ. ಎಷ್ಟು ಜನ ಮಾತೆಯರು ಬಂದಿದ್ದಾರೆಯೋ ಲಿಸ್ಟ್ ಇದೆಯೇ? (4000 ಜನ ಮಾತೆಯರು ಬಂದಿದ್ದಾರೆ) ಎಂದರೆ ಎಷ್ಟು ವೃದ್ಧಿ ಆಗುತ್ತದೆ ಎಂದು ನೋಡುತ್ತೇನೆ. ಧೈರ್ಯವಿದೆಯೇ ಯಾರಾದರೂ ವೃದ್ಧಿಯಾಗುತ್ತದೆ ಎಂದು ಭಾವಿಸುತ್ತಿದ್ದೀರೋ ಅವರು ಕೈಯನ್ನು ಎತ್ತಿರಿ. ಹಾಗೆಯೇ ಎಂದು ಕೈಯನ್ನು ಎತ್ತುವುದಲ್ಲ. ಟಿ.ವಿಯಲ್ಲಿ ಫೋಟೋ ಬರುತ್ತದೆ. ತಂದೆಗೆ ಮಾತೆಯರೆಂದರೆ ವಿಶೇಷವಾದ ಪ್ರೀತಿ ಇದೆ. ಆದ್ದರಿಂದಲೇ ತಂದೆಗೆ ಗೋಪಾಲನು ಎಂಬ ಹೆಸರು ಬಂದಿದೆ. ಮಾತೆಯರ ಕಾರಣದಿಂದಲೇ ಗೋಪಾಲನು ಎಂಬ ಹೆಸರು ಬಂದಿದೆ. ಮಾತೆಯರು ಬಹಳಷ್ಟು ಜನರಿದ್ದಾರೆ.

ಚಿಕ್ಕ ಮಕ್ಕಳು ಉಳಿದುಕೊಂಡಿದ್ದಾರೆ. ಮಕ್ಕಳು ಸದಾ ಪ್ರತಿಯೊಂದು ಸ್ಥಾನಕ್ಕೆ ಅಲಂಕರಣೆಯಾಗಿ ಇರುತ್ತಾರೆ. ಮಕ್ಕಳು ಮುಂದಿರಬೇಕು. ಬಾಪ್‌ದಾದಾರವರಿಗೆ ಮಕ್ಕಳೆಂದರೆ ಅಕ್ಷೋಣಿ ಪ್ರೀತಿ ಇದೆ. ನಿಮ್ಮ ಹಕ್ಕನ್ನು ಪಡೆದಿದ್ದೀರಲ್ಲವೇ? ಚತುರರಲ್ಲವೇ? ಈ ವಿಶ್ವವಿದ್ಯಾಲಯದ ಸ್ಥಾಪನೆಯೂ ಸಹ ಮಕ್ಕಳಿಂದಲೇ ಆಗಿದೆ. ಆದಿಯ ಮಕ್ಕಳೇ ಈಗ ದೊಡ್ಡವರಾಗಿದ್ದಾರಲ್ಲವೇ? ಬಹಳ ಒಳ್ಳೆಯದು. ಮಕ್ಕಳು ಬಾಪ್‌ದಾದಾರವರ ಶಿರೋಕಿರೀಟಗಳು. ಡಬಲ್ ಓದಿನಲ್ಲಿ ಸದಾ ಮೊದಲ ನಂಬರ್ ಪಡೆಯುತ್ತಾ ಇರಬೇಕು. ಲೌಕಿಕ ಓದಿನಲ್ಲಿಯೂ ಸಹ ಮೊದಲ ನಂಬರ್ ಪಡೆಯಬೇಕು. ಎರಡನೇ ಅಥವಾ ಮೂರನೇ ನಂಬರ್ ನವರಲ್ಲ. ಅಲೌಕಿಕ ಓದಿನಲ್ಲಿಯೂ ಸಹ ನಂಬರ್ ಒನ್ ಆಗಿ ಇರುವ ಮಕ್ಕಳಾಗಿ ಇರಬೇಕು. ಬಾಪ್‌ದಾದಾ ಮಾಡಿಸುವ ವ್ಯಾಯಾಮ ನಿಮಗೆ ನೆನಪಿದೆಯಲ್ಲವೇ? ಈಗೀಗಲೇ ನಿರಾಕಾರಿ ಈಗೀಗಲೇ ಫರಿಶ್ತಾ. ನಡೆದಾಡುತ್ತಾ, ಅಡ್ಡಾಡುತ್ತಾ ಈ ಅಭ್ಯಾಸವನ್ನು ಮಾಡುವುದೇ ಬಾಪ್‌ದಾದಾರವರ ಪ್ರೀತಿಗೆ ರಿಟರ್ನ್ ಕೊಡುವುದು. ಈಗಲೇ ಈ ಆತ್ಮಿಕ ವ್ಯಾಯಾಮವನ್ನು ಮಾಡಿರಿ. ಕ್ಷಣದಲ್ಲಿ ನಿರಾಕಾರಿ, ಕ್ಷಣದಲ್ಲಿ ಫರಿಶ್ತಾ ಆಗಬೇಕು (ಬಾಪ್‌ದಾದಾ ವ್ಯಾಯಾಮವನ್ನು ಮಾಡಿಸಿದರು) ಒಳ್ಳೆಯದು. ನಡೆದಾಡುತ್ತಾ ಅಡ್ಡಾಡುತ್ತಾ ದಿನವಿಡೀ ಮಾಡುವ ಈ ವ್ಯಾಯಾಮವು ತಂದೆಯ ಸ್ಮೃತಿಯನ್ನು ಸಹಜವಾಗಿ ಕೊಡಿಸುತ್ತದೆ. ನಾಲ್ಕೂ ಕಡೆ ಇರುವ ಮಕ್ಕಳ ಸ್ಮೃತಿ ಎಲ್ಲಾ ಕಡೆಯಿಂದಲೂ ತಂದೆಗೆ ತಲುಪುತ್ತಿದೆ. ಪ್ರತಿಯೊಂದು ಮಗುವೂ ನನ್ನ ಪ್ರೀತಿಯ ಸ್ಮೃತಿಗಳು, ಪ್ರೀತಿಯ ಸ್ಮೃತಿಗಳು ಎಂದು ಹೇಳುತ್ತಿದ್ದಾರೆ. ಸ್ವಲ್ಪ ಜನ ಉತ್ತರಗಳಿಂದ, ಸ್ವಲ್ಪ ಜನ ಕಾರ್ಡುಗಳಿಂದ, ಸ್ವಲ್ಪ ಜನ ಬಾಯಿಂದ ಹೇಳುತ್ತಿದ್ದಾರೆ ಆದರೆ ಬಾಪ್‌ದಾದಾ ನಾಲ್ಕು ಕಡೆ ಇರುವ ಮಕ್ಕಳನ್ನು ಒಬ್ಬೊಬ್ಬರನ್ನು ನಯನಗಳಲ್ಲಿ ಸಮಾವೇಶಗೊಳಿಸಿಕೊಂಡು ಆ ಪ್ರಿಯ ಸ್ಮೃತಿಗಳ ಬದಲಾಗಿ ಪದಮಾ ಪದಮ್ ಪ್ರಿಯ ಸ್ಮೃತಿಗಳನ್ನು ಕೊಡುತ್ತಿದ್ದಾರೆ. ಈ ಸಮಯದಲ್ಲಿ ಯಾರಿಗೆ ಎಷ್ಟು ಸಮಯ ಟೈಮ್ ಆದರೂ ಆಗಲಿ ಮೆಜಾರಿಟಿ ಆತ್ಮರ ಮನಸಿನಲ್ಲಿ ಮದುಬನ ಮತ್ತು ಮಧುಬನದ ಬಾಪ್‌ದಾದಾರವರೇ ಇದ್ದಾರೆ.

**ನಾಲ್ಕೂ ಕಡೆಯ ಮೂರು ಸಿಂಹಸನಾಧಾರಿಗಳಿಗೆ, ಸ್ವರಾಜ್ಯಧಿಕಾರೀ ಮಕ್ಕಳಿಗೆ, ಸದಾ ಬಾಪ್‌ದಾದಾರವರಿಗೆ ರಿಟರ್ನ್ ಆಗಿ ತಂದೆಯ ಸಮಾನ ಆಗುವಂತಹ ಮಕ್ಕಳಿಗೆ, ಸದಾ ಹಿಂತಿರುಗುವ ಪ್ರಯಾಣದ ಸ್ಮೃತಿ ಸ್ವರೂಪ ಮಕ್ಕಳಿಗೆ, ಸದಾ ಸಂಕಲ್ಪ, ವಾಣಿ ಮತ್ತು ಕರ್ಮದಲ್ಲಿ ತಂದೆಯನ್ನು ಅನುಸರಣೆ ಮಾಡುವಂತಹ ಪ್ರತಿಯೊಬ್ಬ ಮಕ್ಕಳಿಗೂ ಬಾಪ್‌ದಾದಾರವರ ಬಹಳ ಬಹಳ-ಬಹಳ ನೆನಪು, ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 30-11-2002.

***ರಿಟರ್ನ್(ಬದಲಾಗಿ) ಎನ್ನುವ ಶಬ್ದದ ಸ್ಮೃತಿಯಿಂದ ಸಮಾನರಾಗಿ ಮತ್ತು ರಿಟರ್ನ್(ಹಿಂತಿರುಗಿ) ಪ್ರಯಾಣದ ಸ್ಮೃತಿ ಸ್ವರೂಪರಾಗಿರಿ.***

ಯಾರಾದರೆ ಹೃದಯ ಸಿಂಹಾಸನಾಧಿಕಾರಿ ಆತ್ಮರಿದ್ದಾರೆಯೋ ಅವರೇ ವಿಶ್ವದಲ್ಲಿ ವಿಶೇಷ ಆತ್ಮರಾಗಿ ಗಾಯನ ಮಾಡಲ್ಪಡುತ್ತಾರೆ. ದೇಹವೆಂದರೆ ಮಣ್ಣು. ಮಧುರವಾದ ಮುದ್ದಾದ ಮಕ್ಕಳು ಎಂದಿಗೂ ಮಣ್ಣಿನಲ್ಲಿ ಪಾದವನ್ನು ಇಡಬಾರದು. ಸದಾ ಸಿಂಹಾಸನದ ಮೇಲೆ ಇರುತ್ತಾರೆ. ಅಥವಾ ಮಡಿಲಲ್ಲಿ ಅತಿಂದ್ರೀಯ ಸುಖದ ಉಯ್ಯಾಲೆಯಲ್ಲಿ ತೂಗುತ್ತಿರುತ್ತಾರೆ. ಒಂದು ವೇಳೆ ಈಗ ಸಂಗಮ ಯುಗದಲ್ಲಿ ಆಗಾಗ ಹೃದಯ ಸಿಂಹಾಸನಾಧಿಕಾರಿಯಾದರೆ ಸೂರ್ಯವಂಶದ ರಾಯಲ್ ಕುಟುಂಬದಲ್ಲಿಯೂ ಸಹ ಸ್ವಲ್ಪ ಸಮಯವೇ ಇರುತ್ತೀರಿ. ವಿಶ್ವದಲ್ಲಿ ಅಶಾಂತಿ ಇರಬಾರದು ನಿಮ್ಮ ಸಂಬಂಧ ಸಂಪರ್ಕದಲ್ಲಿಯೂ ಅಶಾಂತಿ ಇರಬಾರದು ಎನ್ನುತ್ತಾ...ತನ್ನ ಹೃದಯ ಸಿಂಹಾಸನಾಧಿಕಾರಿ ಸ್ವರಾಜ್ಯಾಧಿಕಾರಿ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಹೃದಯ ಸಿಂಹಾಸನಾಧಿಕಾರಿ, ಬೃಕುಟಿಯ ಸಿಂಹಾಸನಾಧಿಕಾರಿ, ವಿಶ್ವದರಾಜ್ಯ ಸಿಂಹಾಸನ ಅಧಿಕಾರಿ ಮತ್ತು ಸ್ವರಾಜ್ಯಾಧಿಕಾರಿ ಆಗಿದ್ದೇನೆ.

2. ಸ್ವರಾಜ್ಯವೆಂಬುದು (ಪ್ರತಿಯೊಬ್ಬ ಬ್ರಾಹ್ಮಣ ಆತ್ಮನಿಗೆ) ನನಗೆ ಜನ್ಮ ಸಿದ್ಧ ಅಧಿಕಾರವಾಗಿದೆ, ಕೊರಳಹಾರವಾಗಿದೆ.

3. ಹೃದಯ ಸಿಂಹಾಸನಾಧಿಕಾರಿಯಾದ ನಾನು ಭವಿಷ್ಯದಲ್ಲಿಯೂ ವಿಶ್ವದ ಸಿಂಹಾಸನಕ್ಕೆ ಮತ್ತು ವರ್ತಮಾನದಲ್ಲಿ ಸ್ವರಾಜ್ಯಕ್ಕೆ ಅಧಿಕಾರಿಯಾಗಿದ್ದೇನೆ.

4. ನಾನು ಪರಮಾತ್ಮನ ಹೃದಯ ಸಿಂಹಾಸನಾಧಿಕಾರಿಯಾಗಿ ಭಕ್ತಾತ್ಮರಿಗಾಗಿ ಮಾಲೆಯಲ್ಲಿ ಮಣಿಯಾಗಿ ಸ್ಮರಿಸಲ್ಪಡುತ್ತಿದ್ದೇನೆ.

5. ನಾನು ದೇಹವೆಂಬ ಮಣ್ಣಿನಲ್ಲಿ ಪಾದವಿಡದೇ ಸದಾ ಸಿಂಹಾಸನದ ಮೇಲೆ ಅಥವಾ ತಂದೆಯ ಮಡಿಲಲ್ಲಿ ಅಥವಾ ಅತೀಂದ್ರಿಯ ಸುಖ, ಖುಷಿ, ಆನಂದದ ಉಯ್ಯಾಲೆಯಲ್ಲಿ ತೂಗುತ್ತಿದ್ದೇನೆ.

6. ನಾನು ಸಂಗಮಯುಗದಲ್ಲಿ ಹೃದಯ ಸಿಂಹಾಸನಾಧಿಕಾರಿಯಾಗಿ, ಸೂರ್ಯವಂಶಿ ರಾಜಧಾನಿಯಲ್ಲಿ ಮತ್ತು ಚಂದ್ರವಂಶದಲ್ಲಿಯೂ ಸೂರ್ಯವಂಶದ ರಾಜವಂಶದಲ್ಲಿ ಬರುತ್ತಿದ್ದೇನೆ.

7. ನಾನು ಪರಮಾತ್ಮನ ಹೃದಯ ಸಿಂಹಾಸನಧಿಕಾರಿಯಾಗಿ ಪ್ರತ್ಯಕ್ಷ ಚಲನೆ ಮತ್ತು ಚಹರೆಯಿಂದ ನಿಶ್ಚಿತ ಚಕ್ರವರ್ತಿಯಾಗಿ ಡಬಲ್ ಲೈಟ್ ಆಗಿ ಇದ್ದೇನೆ.

8. ನಾನು ದೃಢ ನಿಶ್ಚಯದಿಂದ ಪ್ರತಿಯೊಂದು ಕಾರ್ಯದಲ್ಲಿ ಧೈರ್ಯ ಮತ್ತು ತಂದೆಯ ಸಹಾಯದಿಂದ ಸಫಲತೆಯನ್ನು ಪಡೆಯುತ್ತಿದ್ದೇನೆ. ಎಂದು ಭಾವಿಸುವ ತೀವ್ರ ಪುರುಷಾರ್ಥಿ.

9. ನಾನು ರಿಟರ್ನ್ ಎಂಬ ಒಂದೇ ಮಾತನ್ನು ಸ್ಮೃತಿಯಲ್ಲಿಟ್ಟುಕೊಂಡು ತಂದೆಯ ಸಮಾನವಾಗಿ, ತಂದೆಯಿಂದ ಲಭಿಸಿರುವ ಸರ್ವ ಪ್ರಾಪ್ತಿಗಳ, ಸ್ನೇಹದ, ಸಹಯೋಗದ ರಿಟರ್ನ್ (ಬದಲು) ಕೊಟ್ಟಿದ್ದೇನೆ ಮತ್ತು ರಿಟರ್ನ್ ಜರ್ನಿಯನ್ನು(ಹಿಂತಿರುಗುವ ಪ್ರಯಾಣ ಅಥವಾ ಯಾತ್ರೆ) ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

10. ನನ್ನ ಪ್ರತಿಯೊಂದು ಸಂಕಲ್ಪ, ಮಾತು ಮತ್ತು ಕರ್ಮವನ್ನು ಬ್ರಹ್ಮಾ ತಂದೆಯೊಂದಿಗೆ ಹೋಲಿಸುತ್ತಾ ಪರಿಶೀಲಿಸಿಕೊಳ್ಳುತ್ತಿದ್ದೇನೆ.

11. ನಾನು ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯ ಹೊರತು ಇನ್ಯಾವ ಹೆಜ್ಜೆಯನ್ನು ಹಾಕುವುದಿಲ್ಲ.

12. ನಾನು ಬ್ರಹ್ಮಾ ತಂದೆಯ ಸಮಾನವಾಗಿ ನಿಮಿತ್ತ ಭಾವದೊಂದಿಗೆ ಸಂಕಲ್ಪದಲ್ಲಿ, ಮಾತಿನಲ್ಲಿ, ಸಂಬಂಧದಲ್ಲಿ, ಕರ್ಮದಲ್ಲಿ ನಿರ್ಮಾಣವಾಗಿದ್ದೇನೆ. (ಯಾರಾದರೆ ನಿರ್ಮಾಣವಾಗಿರುವುದಿಲ್ಲವೋ ಅವರಿಗೆ ಸ್ವಲ್ಪ ಮಹಾನ್ ರೂಪದಲ್ಲಿ ಅಭಿಮಾನ ಇರದಿದ್ದರೂ ಅಹಂಕಾರವಿರುತ್ತದೆ)

13. ನಾನು ತಂದೆಯನ್ನು ಅನುಸರಿಸಿ ನಿರಾಕಾರಿಯಾಗಿ, ನಿರಹಂಕಾರಿಯಾಗಿ, ನಿರ್ವಿಕಾರಿಯಾಗಿದ್ದೇನೆ.

14. ನಾನು ಸಫಲತೆಯ ನಕ್ಷತ್ರವಾಗಿದ್ದೇನೆ.

15. ನಾನು ಅಶಾಂತಿಯನ್ನು ತೊಲಗಿಸಿ ಶಾಂತಿದೂತನಾಗಿ ಶಾಂತಿಯನ್ನು ವ್ಯಾಪಿಸುತ್ತಿದ್ದೇನೆ.

16. ನಾನು ವಿಶ್ವಕಲ್ಯಾಣಕಾರಿ, ದಯಾ ಹೃದಯೀ.

17. ನಾನು ಮಕ್ಕಳನ್ನು ಎಚ್ಚರಗೊಳಿಸಿ, ಪಾಲನೆ ಮಾಡಿ, ಅಧಿಕಾರಿಯನ್ನಾಗಿ ಮಾಡುವ ಶಕ್ತಿ ಸ್ವರೂಪ, ಶಕ್ತಿಮಾತೆ.

18. ನಾನು ಕುಟುಂಬದಲ್ಲಿ ಇರುತ್ತಲೂ ಕಮಲ ಪುಷ್ಪ ಸಮಾನವಾಗಿರುತ್ತಿದ್ದೇನೆ.

19. ನಾನು ಕ್ಷಣದಲ್ಲಿ ನಿರಾಕಾರಿಯಾಗಿ, ಕ್ಷಣದಲ್ಲಿ ಫರಿಶ್ತಾ ಆಗುತ್ತಾ ನಡೆಯುತ್ತಾ , ಅಡ್ಡಾಡುತ್ತಾ ದಿನವಿಡೀ ಈ ವ್ಯಾಯಾಮವನ್ನು ಮಾಡುತ್ತಾ ತಂದೆಯ ಸ್ಮೃತಿಯನ್ನು ಸಹಜವಾಗಿ ಇಟ್ಟುಕೊಂಡಿದ್ದೇನೆ.